# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 409ಎ |
| ಸದಸ್ಯರ ಹೆಸರು | : | ಡಾ: ತೇಜಸ್ವಿನಿ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.12.2022 |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯಗಳನ್ನು ವ್ಯಾಪಕವಾಗಿ ಆವರಿಸುತ್ತಿರುವ 'ಕಳೆ'ಯ ವಿವಿಧ ತಳಿಗಳಾವುವು; ಇದರಿಂದ ನೈಸರ್ಗಿಕ ವೈವಿಧ್ಯಮಯ ಅರಣ್ಯ ಸ್ವರೂಪದ ಮೇಲಾಗಿರುವ ದುಷ್ಪರಿಣಾಮಗಳೇನು ; | ರಾಜ್ಯದಲ್ಲಿನ ಅರಣ್ಯ ಪ್ರದೇಶಗಳಲ್ಲಿ ಈ ಕೆಳಕಂಡ ವಿವಿಧ ರೀತಿಯ ಕಳೆಯ ತಳಿಗಳು ಕಂಡು ಬಂದಿರುತ್ತದೆ.<br>1. Lantana camara (common lantana),<br>2. Chromolaena odorata (Eupatorium),<br>3. Parthenium, Senna spectabilis<br><br>ಈ ತಳಿಗಳಿಂದ ನೈಸರ್ಗಿಕ ವೈವಿಧ್ಯಮಯ ಅರಣ್ಯ ಸ್ವರೂಪದ ಮೇಲಾಗಿರುವ ದುಷ್ಪರಿಣಾಮಗಳು;<br>1. ಲಂಟಾನಾವು ಒಂದು ದೀರ್ಘಕಾಲಿಕ ಕಳೆಯಾಗಿದ್ದು, ಇದು ಇತರೆ ಯಾವುದೇ ಜಾತಿಯ ಸಸ್ಯಪ್ರಬೇಧಗಳು ಬೆಳೆಯುವುದಕ್ಕೆ ಆಸ್ಪದ ಕೊಡುವುದಿಲ್ಲ, ಹಾಗೂ ಈ ತಳಿಗಳು ಅರಣ್ಯದಲ್ಲಿ ನೈಸರ್ಗಿಕ ಪುನರುತ್ಪತ್ತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ.<br><br>2. ಲಂಟಾನಾ ತಳಿಗಳು ಅತ್ಯಂತ ದಟ್ಟವಾಗಿ ಬೆಳೆಯುವುದರಿಂದ ವನ್ಯಪ್ರಾಣಿಗಳ ಚಲನ ವಲನಕ್ಕೆ ತೀವ್ರ ಅಡಚಣೆ ಉಂಟಾಗುತ್ತದೆ.<br><br>3. ಲಂಟಾನಾ ತಳಿಗಳು ಅತ್ಯಂತ ದಟ್ಟವಾಗಿ ಬೆಳೆಯುವುದರಿಂದ ಬೇಸಿಗೆ ಕಾಲದಲ್ಲಿ ಲಂಟಾನಾವು ಬೆಂಕಿ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿ ನೆಲಮಟ್ಟದ ಹಾಗೂ ಮೇಲ್ಮಟ್ಟದ ಬೆಂಕಿಗೆ ಮೂಲ ಕಾರಣವಾಗುತ್ತದೆ.<br><br>4. ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗುತ್ತದೆ. |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>ಈ ಕಳೆಯ ಆವರಿಸುವಿಕೆಯಿಂದ ವನ್ಯಜೀವಿಗಳ ಆಹಾರ ಲಭ್ಯತೆ ಕೊರತೆಯಾಗಿದೆಯೇ; ನಿವಾರಣೆಗೆ ಕೈಗೊಂಡಿರುವ ಕ್ರಮಗಳೇನು? (ಫಲಿತಾಂಶದ ವಿವರ ನೀಡುವುದು).</td><td>ಈ ಕಳೆಯ ಆವರಿಸುವಿಕೆಯಿಂದ ವನ್ಯಜೀವಿಗಳ ಆಹಾರ ಲಭ್ಯತೆ ಕೊರತೆಯಾಗಿರುವುದು ಕಂಡುಬಂದಿರುತ್ತದೆ.<br><br>ಈ ಸಮಸ್ಯೆಗಳ ನಿವಾರಣೆಗೆ ರಕ್ಷಿತಾರಣ್ಯ ಹಾಗೂ ವಿವಿಧ ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಮತ್ತು ಪರಿಸರ ವ್ಯವಸ್ಥೆಯನ್ನು ದೀರ್ಘಾವಧಿ ಕಾಲಕ್ಕೆ ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಸಸ್ಯ ಪ್ರಭೇದಗಳ ಜೊತೆಗೆ ನೈಸರ್ಗಿಕವಾಗಿ ಬೆಳೆಯುವ ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸಲು ವಿವಿಧ ಸಸ್ಯಹಾರಿ ಪ್ರಾಣಿಗಳಿಗೆ ಆಹಾರದ ಲಭ್ಯತೆಯನ್ನು ಒದಗಿಸಲು ಸ್ಥಳೀಯ ಪ್ರಭೇದಗಳನ್ನು ಸಹ ಬೆಳೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 109ರಲ್ಲಿ ಘೋಷಣೆಯಾದ "ಲಂಟಾನ ಮತ್ತು ಯುಪಟೋರಿಯಂ ಕಳೆಗಳ ನಿರ್ಮೂಲನೆ" ಎಂಬ ಹೊಸ ಕಾರ್ಯಕ್ರಮ/ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಇದರಡಿಯಲ್ಲಿ ವರ್ಷವಾರು ಕೈಗೊಂಡ ಕಾಮಗಾರಿಯನ್ನು ಕೆಳಗಿನ ಪಟ್ಟಿಯಲ್ಲಿ ನಮೂದಿಸಲಾಗಿದೆ.<br><br>
<table>
<tr><th>ವರ್ಷ</th><th>ನಿರ್ವಹಣೆ ಮಾಡಲಾದ ಹುಲ್ಲುಗಾವಲು ಪ್ರದೇಶ (ಹೆಕ್ಟೇರ್ ಗಳಲ್ಲಿ)</th><th>ಭರಿಸಿದ ವೆಚ್ಚ (ರೂ.ಲಕ್ಷಗಳಲ್ಲಿ)</th></tr>
<tr><td>2019-20</td><td>849.43*</td><td>499.700</td></tr>
<tr><td>2020-21</td><td>296.48*</td><td>249.551</td></tr>
<tr><td>2021-22</td><td>1145.91**</td><td>200.000</td></tr>
</table>
<br>* 2019-20 ಹಾಗೂ 2020-21ನೇ ಸಾಲಿನಲ್ಲಿ ಲಂಟಾನ ಕಳೆಗಳನ್ನು ತೆರವುಗೊಳಿಸಿ ನಂತರ ಹುಲ್ಲುಗಾವಲು ಬೆಳೆಸುವ ಕಾಮಗಾರಿ ಕೈಗೊಳ್ಳಲಾಗಿದೆ.<br><br>** 2021-22ನೇ ಸಾಲಿನಲ್ಲಿ ಹುಲ್ಲುಗಾವಲು ನಿರ್ವಹಣಾ ಕಾಮಗಾರಿಯನ್ನು ಮಾತ್ರ ಕೈಗೊಳ್ಳಲಾಗಿದೆ.<br>2022-23ನೇ ಸಾಲಿನಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಹುಲ್ಲುಗಾವಲು ಪ್ರದೇಶದ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ.</td></tr>
</table>

ಸಂಖ್ಯೆ: ಅಪಜೀ 55 ಎಫ್ ಟಿಎಸ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ